ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಅಬಕಾರಿ ಇಲಾಖೆಯಲ್ಲಿ ಅಐ-5 ಒಂದು ದಿನಕ್ಕಾಗಿ ನೀಡುವ ಪರವಾನಿಗೆ ಬಗ್ಗೆ

ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು ) :-

736 (683) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಅಬಕಾರಿ ಇಲಾಖೆಯಲ್ಲಿ `ಅಐ-5 ಒಂದು ದಿನಕ್ಕಾಗಿ ನೀಡುವ ಪರವಾನಿಗೆ' ಯಾವ ಉದ್ದೇಶಕ್ಕಾಗಿ ನೀಡಲಾಗುತ್ತದೆ ; ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ 2018-19, 2019-20ರಲ್ಲಿ ಎಷ್ಟು ಇಂತಹ ಪರವಾನಿಗೆ ಪಡೆಯಲಾಗಿದೆ ; (ವಿವರ ನೀಡುವುದು)

(ಆ) ಅಐ-5, ಹುಟ್ಟುಹಬ್ಬ, ಮದುವೆ ಹಾಗೂ ಇನ್ನಿತರ ಚಿಕ್ಕ ಕಾರ್ಯಕ್ರಮಗಳಿಗೆ ಮದ್ಯವನ್ನು ವಿತರಿಸುವ ಸಂದರ್ಭದಲ್ಲಿ ಈ ಪರವಾನಗಿ ಅಗತ್ಯವಿದೆಯೇ; ಪರವಾನಗಿ ಎಷ್ಟು ದಿನದ ಮುಂಚಿತವಾಗಿ ನೀಡಲಾಗುತ್ತಿದೆ ; ಇದಕ್ಕೆ ತಗಲುವ ವೆಚ್ಚ ಎಷ್ಟು; (ವಿವರ ನೀಡುವುದು)

(ಇ) ಪರವಾನಗಿ ಪಡೆಯಲು ಬೇಕಾಗಿರುವ ದಾಖಲೆಗಳು ಯಾವುವು; ಮದ್ಯವನ್ನು ಎಲ್ಲಿಂದ ಖರೀದಿ ಮಾಡಬೇಕು ; (ವಿವರ ನೀಡುವುದು)

(ಈ) ಸಾರ್ವಜನಿಕ ಹಾಲ್‌ಗಳಲ್ಲಿ ಮದುವೆ ಮುಂತಾದ ಕಾರ್ಯಕ್ರಮಗಳಲ್ಲಿ ಮದ್ಯ ವಿತರಣೆಗೆ ಅವಕಾಶ ನೀಡಲಾಗುತ್ತಿದೆಯೇ ; 2018-19, 2019-20ರಲ್ಲಿ ರಾಜ್ಯದಲ್ಲಿ ಅಬಕಾರಿ ಇಲಾಖೆಗೆ ಎಷ್ಟು ಸುಂಕ ವಸೂಲಾಗಿರುತ್ತದೆ; ವಸೂಲಿಗೆ ಇದ್ದ ಗುರಿ ಎಷ್ಟು ; (ವಿವರ ನೀಡುವುದು)

(ಉ) ಫೋನ್ ಮೂಲಕ ಮದ್ಯ ಖರೀದಿಸುವ ಯೋಜನೆ ಜಾರಿಗೆ ಬಂದಿದೆಯೇ ; (ವಿವರ ನೀಡುವುದು)

(ಊ) ಅಕ್ರಮವಾಗಿ ಮದ್ಯ ಮಾರಾಟ ಮಾಡುವವರ ಮೇಲೆ 2018-19, 2019-20ರಲ್ಲಿ ಎಷ್ಟು ಪ್ರಕರಣಗಳು ದಾಖಲಿಸಲಾಗಿದೆ? (ವಿವರ ನೀಡುವುದು)